

ದಲೈ ಲಾಮ ಮತ್ತು ಹೈನ್ರಿಚ್ ಹರರ್

ಚಹ ಕುಡಿಯುತ್ತಿದ್ದಂತೆ ಅವರು ಕೂತಿದ್ದ ಕುರ್ಚಿಯ ಮೇಲೆ, ಎರಡು ಇಂಚು ದಪ್ಪದ, ಮೂರು ಅಡಿ ಉದ್ದದ ಮರದ ಪಟ್ಟಿಯ ಆಧಾರದ ಮೇಲೆ ನಿಲ್ಲಿಸಿದ್ದ, ಗೋಡೆಯಿಂದ ಹೊರಗೆ ಓರೆಯಾಗಿ ಬಾಗಿದಂತೆ ಕಟ್ಟಿ ನಿಲ್ಲಿಸಿದ್ದ ಎರಡು ಚಿತ್ರಪಟಗಳತ್ತ ನನ್ನ ಗಮನ ಹರಿಯಿತು. ಕಪ್ಪುಬಿಳುಪಿನ ಪ್ರತಿ ಚಿತ್ರದಲ್ಲೂ ಇಬ್ಬರು ವ್ಯಕ್ತಿಗಳು. ಒಬ್ಬರು ದಲೈ ಲಾಮಾ. ಮತ್ತೊಬ್ಬರು ಯುರೋಪಿನ ವ್ಯಕ್ತಿ. ಕುತೂಹಲದಿಂದ,

"ಅಲ್ಲಿ ದಲೈ ಲಾಮಾ ಜೊತೆ ಇರುವವರು ಯಾರು?" ಎಂದು ಕೇಳಿದೆ.

"ಒಂದು ಚಿತ್ರದಲ್ಲಿರುವವರು ಅವರ ಜೊತೆ ಏಳು ವರ್ಷ ಇದ್ದು ಅವರಿಗೆ ಇಂಗ್ಲಿಷ್ ಮತ್ತು ವಿಜ್ಞಾನ, ಜಾಗತಿಕ ವಿಷಯಗಳ ಬಗ್ಗೆ ತಿಳಿಹೇಳಿದ ಹೈನ್ರಿಚ್ ಹರರ್" ಎಂದರು.

"ಹೋ. **Seven Years in Tibet** ಬರೆದವರು?"

"ಹೌದು. ನಂಗ್ಪಾ ಪರ್ವತಕ್ಕೆ ಒಂದು ಸುಗಮವಾದ ಹಾದಿ ಕಂಡು ಹಿಡಿದ ಜರ್ಮನ್. ಅವರ ಪುಸ್ತಕ ಹಾಲಿವುಡ್‌ನ ಚಿತ್ರವೂ ಆಗಿದೆ" ಎಂದರು. ನಾವೆಲ್ಲರೂ ತಲೆದೂಗುತ್ತಿದ್ದಂತೆ ಮೌನವಾದರು. ಸ್ವಲ್ಪ ಹೊತ್ತಾದರೂ ಅವರು ಇನ್ನೊಂದು ಚಿತ್ರದ ಬಗ್ಗೆ ಹೇಳಲಿಲ್ಲವಾಗಿ ಉಮಾಶಂಕರ್– "ಆ ಮತ್ತೊಬ್ಬರು?" ಎಂದು ಕೇಳಿದ.

ಆ ಪ್ರಶ್ನೆಗೆ ಉತ್ತರಿಸದೆ ಏಕೋ ಮೌನವಾದರು. ಅವರನ್ನು ಯಾವುದೋ ಚಿಂತೆ ಕಾಡುವಂತಿತ್ತು. ಅವರ ಮೌನ ಆಶ್ಚರ್ಯವಾಗಿ ಕಂಡಿತು. ಯಾರೋ ಯುರೋಪಿನ ವ್ಯಕ್ತಿಯೊಬ್ಬ ದಲೈ ಲಾಮಾ ಜೊತೆ ಇರುವ ಚಿತ್ರ ಅವರನ್ನೇಕೆ ಖಿನ್ನವಾಗಿಸಿದೆ? ಅವರೆ ಬಯಸಿ ಹಾಕಿಕೊಂಡಿರುವ ಚಿತ್ರದಲ್ಲಿನ ವ್ಯಕ್ತಿ ಯಾರು ಎಂದು ಹೇಳಲು ಏಕೆ ಕಷ್ಟ? ಎಂಬ ಪ್ರಶ್ನೆಗಳು ನಮ್ಮೆಲ್ಲರಲ್ಲಿಯೂ ಮೂಡಿದವು. ಆದರೂ ಅವರನ್ನು ಒತ್ತಾಯಿಸಬೇಕು ಅನಿಸಲಿಲ್ಲವಾಗಿ ನಾನು ಉಮಾಶಂಕರ್‌ನ ಕೈಹಿಡಿದೆ, 'ಸುಮ್ಮನಿರು ಒತ್ತಾಯಿಸಬೇಡ' ಎಂದು ಸೂಚಿಸಲು. ಆದರೆ ಅವರ ಸೂಕ್ಷ್ಮತೆಗೆ ನಾನು ಹಾಗೆ ಮಾಡಿದ್ದು ಕಾಣದಿರಲಿಲ್ಲ. ಅವರು ನಿಧಾನವಾಗಿ ಹೇಳಿದರು.

"ಬ್ರುನೋ ಬೆಗರ್ ಎಂಬಾತ. ಆತನೂ ಜರ್ಮನಿಯವನೆ, ವಿಜ್ಞಾನಿ" ಎಂದರು.

"ಬ್ರುನೋ ಬೆಗರ್? ವಿಜ್ಞಾನಿ? ಆತ ಯಾರೆಂದು ತಿಳಿಯದು" ಕೇಳಿದಳು ವೀಣಾ. ನನಗೆ ವೀಣಾ ಬಗ್ಗೆ ಕೋಪ ಬಂದಿತ್ತು, ಅವರಲ್ಲಿ ಸುಳಿದಾಡುತ್ತಿರುವ ಸೂಕ್ಷ್ಮತೆ ಮತ್ತು ಅಸಮಾಧಾನವನ್ನು ಗಮನಿಸದಿರುವುದಕ್ಕೆ. ಅವರು ದೀರ್ಘವಾದ ಉಸಿರು ಬಿಟ್ಟು,

"ತಿಳಿಯದಿರುವುದೆ ಒಳಿತೇನೋ" ಎಂದರು. ಎಲ್ಲರಿಗೂ ಆಶ್ಚರ್ಯ. ಅವರು ಮತ್ತೆ ತಮ್ಮ ಮುಖವನ್ನು ಕಿಟಕಿಯತ್ತ ತಿರುಗಿಸಿ, ಎಲ್ಲೋ ನೋಡುತ್ತ, "ನಿಮ್ಮ ಹಾಗೆ ಆರ್ಯರ ಹುಡುಕಾಟದಲ್ಲಿದ್ದವ. ಅದಕ್ಕೆಂದೆ ಟಿಬೆಟ್ಟಿಗೆ ಭೇಟಿ ನೀಡಿದ್ದ. ಆತನೊಬ್ಬ ಆಂಥ್ರೊಪಾಲಜಿಸ್ಟ್,